# ಜಾತಿ ಪದ್ಧತಿ ವಿರೋಧಿಸಿ, ದಲಿತರ ಘನತೆ ಗೌರವ ಮತ್ತು ಸಮಾನತೆಗಾಗಿ

CPI(M)

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿ

ನಮ್ಮ ದೇಶದಲ್ಲಿ ದಲಿತರು ಬಹು ಸಂಖ್ಯೆ ಕೃಷಿ ಕೂಲಿಗಾರರಾಗಿದ್ದಾರೆ ಮತ್ತು ಬಹುದೊಡ್ಡ ಗುಂಪು ಮಾಹಿತಿಯಿಲ್ಲದ ವಿಭಾಗದ ದುಡಿಮೆಗಾರರಾಗಿದ್ದಾರೆ. ಆರ್ಥಿಕತೆ ಮತ್ತು ಸಮಾಜವನ್ನು ಮುನ್ನಡೆಸಲು ಅವರ ಶ್ರಮವೇ ಅತ್ಯವಶ್ಯಕವಾಗಿದೆ. ಈ ಆರ್ಥಿಕತೆಯಲ್ಲಿ ಇಷ್ಟು ಮುಖ್ಯ ಪಾತ್ರ ವಹಿಸುತ್ತಿರುವಾಗಲೂ ಕೂಡ ಅವರು ಸಮಾಜದಲ್ಲಿ ಅತ್ಯಂತ ತುಳಿತಕ್ಕೊಳಗಾದ ವಿಭಾಗದವರಾಗಿದ್ದಾರೆ. ಯುಪಿಎ ಸರ್ಕಾರ ಅನುಸರಿಸುತ್ತಿರುವ ನವಉದಾರೀಕರಣದ ನೀತಿಗಳು ಅವರ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿದೆ.

## ಪರಿಶಿಷ್ಟ ಜಾತಿ ಪಂಗಡಗಳ ಉದ್ಯೋಗದ ಮೇಲೆ ಖಾಸಗೀಕರಣದ ಪ್ರಭಾವ

ಸಾರ್ವಜನಿಕ ಉದ್ದಿಮೆಗಳ ಮುಚ್ಚುವಿಕೆ ಮತ್ತು ಹೆಚ್ಚುತ್ತಿರುವ ಖಾಸಗೀಕರಣದಿಂದಾಗಿ ಮೀಸಲಾತಿ ಅರ್ಥ ಕಳೆದುಕೊಂಡಿದೆ. ಖಾಸಗೀಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕೆಂಬ ಧೀರ್ಘಕಾಲದ ಬೇಡಿಕೆಯನ್ನು ಯುಪಿಎ ಸರ್ಕಾರವು ಇದುವರೆವಿಗೂ ಮಾನ್ಯ ಮಾಡಲಿಲ್ಲ. ಕಾಂಗ್ರೆಸ್ ಪಕ್ಷವು ಕಳೆದ ಚುನಾವಣೆಯಲ್ಲಿ ಖಾಸಗೀಕ್ಷೇತ್ರದಲ್ಲಿ ಮೀಸಲಾತಿ ನೀಡುವ ಭರವಸೆ ನೀಡಿತ್ತಾದರೂ, ಖಾಸಗೀ ಕಾರ್ಪೊರೇಟ್‌ಗಳ ಒತ್ತಾಯಕ್ಕೆ ಮಣಿದು ಭರವಸೆಯನ್ನು ಈಡೇರಿಸಲು ವಿಫಲವಾಯಿತು.

ಅದೇ ಸಂದರ್ಭದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆಸಕ್ತಿ ತೋರುತ್ತಿಲ್ಲ. ನೇರವಾಗಿ ಪ್ರಧಾನಮಂತ್ರಿಗಳ ನೇತೃತ್ವದಲ್ಲೇ ಇರುವ ಸಿಬ್ಬಂದಿ, ಸಾರ್ವಜನಿಕ

ಕುಂದು ಕೊರತೆಗಳು ಮತ್ತು ನಿವೃತ್ತಿ ವೇತನ ಸಚಿವಾಲಯದ ಹೇಳಿಕೆಯ ಪ್ರಕಾರ ಎಸ್.ಸಿ, ಎಸ್.ಟಿ ಮತ್ತು ಒಬಿಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಲ್ಲಿ ಸರ್ಕಾರದ ಯಶಸ್ವಿಯ ಮಟ್ಟ ಶೇಕಡಾ 30ಕ್ಕಿಂತಲೂ ಕಡಿಮೆ ಇದೆ. ಅನೇಕ ಸಚಿವಾಲಯಗಳಲ್ಲಿ, ಇಲಾಖೆಗಳಲ್ಲಿ ಮತ್ತು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಒಟ್ಟು ಖಾಲಿಯಿರುವ 76,137 ಹುದ್ದೆಗಳಲ್ಲಿ ಕೇವಲ 26,472 ಹುದ್ದೆಗಳನ್ನು ಮಾತ್ರವೇ ವಿಶೇಷ ನೇಮಕಾತಿ ಯೋಜನೆಯಡಿಯಲ್ಲಿ ಸರ್ಕಾರಕ್ಕೆ ಭರ್ತಿಮಾಡಲು ಸಾಧ್ಯವಾಯಿತು, ಅಂದರೆ ಮೂರರಲ್ಲಿ ಬರಿ ಒಂದು ಖಾಲಿ ಹುದ್ದೆಯನ್ನು ಮಾತ್ರ ತುಂಬಲಾಗಿದೆ. ಅದರರ್ಥ ಆ ಹುದ್ದೆಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲ ಎಂದಲ್ಲ; ಬದಲಿಗೆ ಎಲ್ಲಾ ವಿಭಾಗಗಳಲ್ಲೂ ನಿರುದ್ಯೋಗ ಹೆಚ್ಚುತ್ತಿದೆ ಎಂಬುದನ್ನು ಸರ್ಕಾರದ ಅಂಕಿಅಂಶಗಳೇ ಹೇಳುತ್ತಿವೆ.

ಹೆಚ್ಚುತ್ತಿರುವ ಭೂಹೀನತೆ: ದಲಿತರ ಸಾಮಾಜಿಕ ಪರಿಸ್ಥಿತಿ ಚಿಂತಾಜನಕ ಸ್ಥಿತಿಯಲ್ಲಿ ಮುಂದುವರಿದಿದೆ. ಬಹು ಸಂಖ್ಯಾತ ದಲಿತರು ಕೃಷಿ ಅವಲಂಬಿತ ಉದ್ಯೋಗಗಳ ಮೇಲೆ ಅವಲಂಬಿತರಾಗಿದ್ದಾಗ್ಯೂ ಅವರಲ್ಲಿ ಎಲ್ಲೋ ಕೆಲವರು ಮಾತ್ರ ಭೂಮಿಯನ್ನು ಹೊಂದಿದ್ದಾರೆ. ಜಮೀನನ್ನು ಹೊಂದಿದವರೂ ಅತ್ಯಂತ ಕಡಿಮೆ ಹಿಡುವಳಿ ಹೊಂದಿದ್ದಾರೆ ಮತ್ತು ಅದನ್ನೂ ಅವರು ಕಳೆದುಕೊಳ್ಳುತ್ತಿದ್ದಾರೆ. 2011ರ ಜನಗಣತಿ ಪ್ರಕಾರ ದಲಿತರು ಭೂಮಿಯನ್ನು ಕಳೆದುಕೊಳ್ಳುವ ಪ್ರಕ್ರಿಯೆ ಹೆಚ್ಚಾಗಿದ್ದು, ಅವರು ಕೃಷಿ ಕೂಲಿಗಾರರಾಗುತ್ತಿದ್ದಾರೆ. ಜನರ ಎಲ್ಲಾ ವಿಭಾಗದಲ್ಲಿ ಕೃಷಿ ಕೂಲಿಗಾರರಲ್ಲಿ ಬಹುಪಾಲು ಪರಿಶಿಷ್ಟ ಜಾತಿಯಿಂದ ಕೂಡಿದೆ.

'ಕೃಷಿಕರು' ಎಂದು ಜನಗಣತಿಯಲ್ಲಿ ವರ್ಗೀಕರಿಸಲ್ಪಟ್ಟ ತಮ್ಮ ಜಮೀನನ್ನು ತಾವೇ ಉಳುಮೆ ಮಾಡುತ್ತಿರುವವ ಪರಿಶಿಷ್ಟ ಜಾತಿಯವರ ಸಂಖ್ಯೆಯು ಕೂಡ ಗಣನೀಯ ಪ್ರಮಾಣದಲ್ಲಿ ಇಳಿಮುಖವಾಗಿದೆ. 2001ರಲ್ಲಿ ಶೇ.20 ಇದ್ದದ್ದೂ, 2011ರಲ್ಲಿ ಶೇ.14.8ಕ್ಕೆ ಇಳಿಕೆ ಕಂಡು, ಭೂಒಡೆತನ ತ್ವರಿತಗತಿಯುಲ್ಲಿ ಇಳಿಮುಖವಾಗುತ್ತಿರುವುದನ್ನು ಸ್ಪಷ್ಟವಾಗಿದೆ. ಸರ್ಕಾರ ಅನುಸರಿಸುತ್ತಿರುವ ನೀತಿಗಳಿಂದಾಗಿ ದಲಿತರು ಹೊಂದಿದ್ದ ಅಲ್ಪ ಸ್ವಲ್ಪ ಜಮೀನನ್ನೂ ಕೂಡ ಅವರಿಂದ ಕಿತ್ತುಕೊಳ್ಳಲಾಗುತ್ತಿದೆ ಎಂಬುದನ್ನು ಇದು ದೃಢಪಡಿಸುತ್ತದೆ. ಹೆಚ್ಚುತ್ತಿರುವ ಕೃಷಿಯ ವೆಚ್ಚ ಹಾಗೂ ಸರ್ಕಾರಿ ಸಹಾಯದ ಕೊರತೆಯು ದಲಿತರನ್ನು ಕೃಷಿಯಿಂದ ಹೊರತಳ್ಳುತ್ತಿದೆ. ಕಾಂಗ್ರೆಸ್ ಸರ್ಕಾರವು ದಲಿತರಿಗೆ ಕೃಷಿಯಲ್ಲಿ ಸಹಾಯ ಮಾಡುವ

ಬದಲು ಈ ಬಾರಿಯ ಬಜೆಟ್‌ನಲ್ಲಿ ದಲಿತರಿಗೆ ಮೀಸಲಿಟ್ಟ 22 ಯೋಜನೆಗಳನ್ನು ತೆಗೆದುಹಾಕುವ ಘೋಷಣೆ ಮಾಡಿದೆ, ಇದೇ ಸಾಕು ಸರ್ಕಾರಕ್ಕೆ ದಲಿತರ ಬಗ್ಗೆ ಮತ್ತು ದಲಿತರ ಸಬಲೀಕರಣ ಬಗ್ಗೆ ಎಷ್ಟು ಕಾಳಜಿ ಇದೆ ಎಂಬುದನ್ನು ತೋರಿಸಲು.

ಹೆಚ್ಚುತ್ತಿರುವ ತಾತ್ಕಾಲಿಕ ಅಥವಾ ದಿನಗೂಲಿ ಉದ್ಯೋಗ: ಮತ್ತೊಂದು ಕಳವಳಕಾರಿ ಬೆಳವಣಿಗೆಯೆಂದರೆ, ಜನಗಣತಿಯು ಸತತ 6 ತಿಂಗಳೂ ಕೆಲಸ ಮಾಡುವವರನ್ನು 'ಪ್ರಮುಖ ಕೆಲಸಗಾರರು' ಎಂದು ಪರಿಗಣಿಸುವ ಪರಿಶಿಷ್ಟ ಜಾತಿ ಕೆಲಸಗಾರರ ಸಂಖ್ಯೆ ಇಳಿಮುಖವಾಗುತ್ತಿದೆ. 2001ರಲ್ಲಿ 73% ಇದ್ದದ್ದು 2011ರಲ್ಲಿ 70.7% ಕ್ಕೆ ಇಳಿದಿದೆ. ಮತ್ತು ಅದೇ ರೀತಿಯಲ್ಲಿ, ಕಾರ್ಮಿಕವರ್ಗದ 'ತಾತ್ಕಾಲೀಕರಣ' ಪ್ರಕ್ರಿಯೆಯು ಹೆಚ್ಚು ಸ್ಪಷ್ಟವಾಗಿ ಕಾಣಬರುತ್ತಿದೆ; ಪರಿಶಿಷ್ಟ ಜಾತಿಯವರಿಗೆ ಸಂಬಂಧಪಟ್ಟಂತೆ, 2001ರಲ್ಲಿ ಶೇ. 27% ಇದ್ದು 2011ರಲ್ಲಿ ಶೇ.29.3% ಆಗಿದೆ. ಕೆಲಸದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರ ಪರಿಶಿಷ್ಟ ಜಾತಿಯವರಲ್ಲಿ 2011ರ ಜನಗಣತಿ ಪ್ರಕಾರ 28.3%ಕ್ಕೆ ಇಳಿದಿದೆ.

ಕುಟುಂಬಗಳು ನಡೆಸುತ್ತಿದ್ದ ಸಣ್ಣ ಉದ್ದಿಮೆಗಳು ಮುಚ್ಚಿ ಅವರು ಕೆಲಸಗಾರರಾಗಿ ದುಡಿಯುತ್ತಿದ್ದಾರೆ ಎಂದು ಜನಗಣತಿ ಅಂಕಿ ಅಂಶಗಳು ಹೇಳುತ್ತಿವೆ. ಪರಿಶಿಷ್ಟ ಜಾತಿಗಳಲ್ಲಿನ 'ಕುಟುಂಬ ಉದ್ದಿಮೆಗಳಲ್ಲಿನ ಕೆಲಸಗಾರರು' 2001ರಲ್ಲಿ 3.9% ಇದ್ದದ್ದು 2011ರಲ್ಲಿ 3.2%ಗೆ ಇಳಿದಿದೆ. ದಲಿತರು ನಡೆಸುವ ಉದ್ದಿಮೆಗಳಿಗೆ ಸಾಲಗಳನ್ನು ಒದಗಿಸುವುದು ಮತ್ತು ಮಾರ್ಕೆಟಿಂಗ್ ವ್ಯವಸ್ಥೆ ಮಾಡಿಕೊಡದೆ ಇರುವುದು, ಸರ್ಕಾರದ ಬೆಂಬಲದ ಕೊರತೆಯನ್ನು ನಿಚ್ಚಳವಾಗಿ ತೋರುತ್ತಿದೆ. ದಲಿತರ ಸಾಲದ ಅರ್ಜಿಗಳನ್ನು ಮಂಜೂರು ಮಾಡದಿರುವ ಅಲಿಖಿತ ನೀತಿ ಇದ್ದಂತಿದೆ. 2012ರ ಆರ್.ಬಿ.ಐ ವರದಿಯ ಪ್ರಕಾರ ದಲಿತ ಉದ್ದಿಮೆದಾರರಿಗೆ ಸಾಲ ನೀಡುವಿಕೆಯಲ್ಲಿ 33.8% ಕುಸಿತವಾಗಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಈ ಪ್ರವೃತ್ತಿಯನ್ನು ಹಿಮ್ಮೆಟ್ಟಿಸಲು ಯಾವುದೇ ಕ್ರಮ ಕೈಗೊಂಡಿಲ್ಲ.

**ಶಿಕ್ಷಣದ ಹಕ್ಕಿನಿಂದ ವಂಚನೆ:**

ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಬ್ಬಾಳಿಕೆಗೆ ಒಳಪಟ್ಟ ದಲಿತರು ತೀರ ಸಂಕಷ್ಟದಲ್ಲಿದ್ದಾರೆ. ಶಿಕ್ಷಣಕ್ಷೇತ್ರದಲ್ಲೂ, ಸಂವಿಧಾನಾತ್ಮಕವಾಗಿ ಮೀಸಲಾತಿ ಇರುವಾಗಲೂ, ಸಾರ್ವಜನಿಕ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ದಲಿತರಿಗೆ ಅದರಿಂದ

ಪ್ರಯೋಜನವಾಗುತ್ತಿಲ್ಲ. ಪ್ರಾಥಮಿಕ ಹಂತದಲ್ಲಿ ಶಾಲೆಯಿಂದ ಹೊರಗೆ ಹೋದವರ ಪ್ರಮಾಣ ಸಮಾಜದ ಇತರರಿಗಿಂತ ದಲಿತರಲ್ಲಿ ಹೆಚ್ಚಾಗಿದೆ. ಕಾನೂನಾತ್ಮಕವಾಗಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 15% ಸ್ಥಾನಗಳನ್ನು ದಲಿತರಿಗೆ ನೀಡಬೇಕು ಎಂದು ಇದ್ದರೂ, ಅಂಕಿ ಅಂಶಗಳ ಪ್ರಕಾರ ಬರೀ ಶೇ. 10ರಷ್ಟು ಸ್ಥಾನಗಳಲ್ಲಿ ಮಾತ್ರ ದಲಿತರು ಇದ್ದಾರೆ. ದಲಿತರು ಮೇಲೆ ಹೋದಂತೆಲ್ಲಾ ತಾರತಮ್ಯವು ಕೂಡಾ ಹೆಚ್ಚಾಗುತ್ತದೆ! ಐಐಟಿ ಮತ್ತು ಐಐಎಂ ಮುಂತಾದ ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ದಲಿತರ ಸಂಖ್ಯೆ ಶೇ.10ರಂತೆ ಕಡಿಮೆ ಇದೆ; ಅಂದರೆ ಈ ಸಂಸ್ಥೆಗಳಲ್ಲಿ ದಲಿತರಿಗೆ ಮೀಸಲಿಟ್ಟ ಮೂರು ಸ್ಥಾನಗಳಲ್ಲಿ ಒಂದು ಸ್ಥಾನ ಖಾಲಿ ಉಳಿಯುತ್ತದೆ. ಅದಕ್ಕಿಂತ ದುರಂತವೆಂದರೆ ಕಾಂಗ್ರೆಸ್ ಸರ್ಕಾರವು ದಲಿತರಿಗೆ ವಿದ್ಯಾರ್ಥಿ ವೇತನಗಳಿಗೆ ಮೀಸಲಿಟ್ಟ ಹಣವನ್ನು ನಿರಂತರವಾಗಿ ಕಡಿತಗೊಳಿಸುತ್ತಾ ಬಂದಿದೆ. ಈ ವರ್ಷ ಕೂಡ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ರೂ.400 ಕೋಟಿಯಷ್ಟು ಮೊತ್ತ ಕಡಿತಗೊಳಿಸಿದೆ.

## ವಿಶೇಷ ಘಟಕ ಯೋಜನೆ(ಎಸ್.ಸಿ.ಪಿ), ಅಥವಾ ವಿಶೇಷ ವಿವಿಧ ರೀತಿಯ ಯೋಜನೆ: (ಎಸ್.ಡಿ.ಪಿ)

ಮಾನವ ಅಭಿವೃದ್ಧಿಯ ಎಲ್ಲ ಮಾನದಂಡಗಳಲ್ಲಿಯೂ ದಲಿತರು ಹಿಂದೆ ಬಿದ್ದಿದ್ದಾರೆ. ಬೇಕಷ್ಟು ಭರವಸೆ ಮತ್ತು ಯೊಜನೆಗಳನ್ನು ಘೋಷಿಸಿದ್ದರೂ ಕೂಡ ಯಾವುದೇ ಪ್ರಗತಿಯನ್ನು ಕಂಡುಬಂದಿಲ್ಲ. ಭರವಸೆಗಳನ್ನು ಸರಿಯಾಗಿ ಜಾರಿಗೊಳಿಸಲೂ ಇಲ್ಲ. ನಾವು ದಲಿತರ ಜೀವನ ಪರಿಸ್ಥಿತಿಯ ಮೇಲೆ ಗಮನಾರ್ಹವಾದ ಪ್ರಭಾವ ಬೀರುವಂತಹ ಒಂದು ಅಂತಹ ಯೋಜನೆಯನ್ನು ಪರೀಕ್ಷಿಸೋಣ, ಅದು ಪರಿಶಿಷ್ಟ ಜಾತಿಯ ಉಪಯೊಜನೆ (ವಿಶೇಷ ಸಾಧಕ ಯೋಜನೆ (ಎಸ್.ಸಿ.ಪಿ)).

ವಿಶೇಷ ಸಾಧಕ ಯೋಜನೆ (ಎಸ್.ಸಿ.ಪಿ) ಪ್ರಕಾರ ದಲಿತರಿಗಾಗಿ ಕೇಂದ್ರ ಸರಕಾರದ ಆಯವ್ಯದ ಯೋಜನಾ ವೆಚ್ಚದ ಮೊತ್ತವು ಅವರ ಜನಸಂಖ್ಯೆಯ ಆಧಾರದಲ್ಲಿರಬೇಕು. ಆದರೆ ಈ ನಿಯಮವನ್ನು ಯುಪಿಎ ಸರಕಾರ ಕಣ್ಣಿಗೆ ರಾಚುವಂತೆ ಉಲ್ಲಂಘಿಸಿದೆ. 2014–15ರ ವರ್ಷದಲ್ಲಿನ ಆಯವ್ಯಯದಲ್ಲಿನ ನಿಯಮದ ಪ್ರಕಾರ 16.6ಶೇ ಹಣವನ್ನು ದಲಿತರಿಗಾಗಿ ಮೀಸಲಿಡಬೇಕಿತ್ತು. ಆದರೆ

ದಕ್ಕೆ ಬದಲಾಗಿ ಶೇ.8.76 ರಷ್ಟು ಹಣವನ್ನು, ಎಂದರೆ ಕೊಡಬೇಕಿದ್ದ ಹಣದ ಅರ್ಧದಷ್ಟನ್ನು ಮಾತ್ರ ಕೊಡಲಾಗಿದೆ. 2014–15ರ ಆಯವ್ಯದ ಒಟ್ಟು ಮೊತ್ತದ ಹಣ ರೂ. 17,63,214 ಕೋಟಿಗಳಾಗುತ್ತದೆ. ಎಸ್.ಸಿ.ಎಸ್.ಪಿ ಅಡಿಯಲ್ಲಿ ಯಾವುದನ್ನು ಹಂಚಿಕೊಡಬೇಕಿತ್ತೋ ಅದು ರೂ. 92,183.45 ಕೋಟಿ ಆಗುತ್ತದೆ. ಆದರೆ ವಾಸ್ತವವಾಗಿ ಕೊಟ್ಟಿದ್ದು ಕೇವಲ ರೂ.48638.3ಕೋಟಿಗಳು.ಇದು ಕೂಡ ಕೊಡಬೇಕಾದ ಮೊತ್ತದ ಅರ್ಧದಷ್ಟು ಮಾತ್ರ ಆಗುತ್ತದೆ. ನಮ್ಮ ಅನುಭವದ ಪ್ರಕಾರ ದಲಿತರಿಗಾಗಿ ಇಟ್ಟ ಹಣವನ್ನು ಕೂಡ ದಲಿತರ ಕ್ಷೇಮಕ್ಕಾಗಿ ವೆಚ್ಚ ಮಾಡಿಲ್ಲ, ಕಳೆದ ವರ್ಷದಲ್ಲಿನ ಆಯವ್ಯದಲ್ಲಿ(2013–14) ಎಸ್.ಸಿ.ಎಸ್.ಪಿ. ಗಾಗಿ ರೂ.41,561.13 ಕೋಟಿಯನ್ನು ಹಂಚಿಕೊಡಲಾಗಿತ್ತು. ಆದರೆ ಪರಿಷ್ಕೃತ ಯೋಜನೆಯ ಪ್ರಕಾರ ಬರಿ ರೂ.35800.6ನ್ನು ಮಾತ್ರ ವೆಚ್ಚಮಾಡಲಾಗಿತ್ತು. ಇದು ದಲಿತರ ಕ್ಷೇಮ ಮತ್ತು ಏಳಿಗೆಯ ಕಡೆಗೆ ಇರುವ ಯುಪಿಎ ಸರಕಾರದ ಮನೋವೃತ್ತಿಯನ್ನು ನಿಚ್ಚಳವಾಗಿ ತೋರಿಸುತ್ತಿದೆ.

| **Particulars of Total Plan and Non -Plan budget ಯೋಜನಾ ಮತ್ತು ಯೋಜನೇತರ ವೆಚ್ಚ.** | | | | |
|---|---|---|---|---|
| Particular ವಿವರಗಳು | 2012-13 (AE) | 2013-14 (BE) | 2013-14 (RE) | 2014-15 (BE) |
| Total Budget ಒಟ್ಟು ಬಜೆಟ್ | 1410367 | 1665297 | 1590434 | 1763214 |
| Plan Budget ಯೋಜನಾ ಬಜೆಟ್ | 413625 | 555322 | 475532 | 555322 |
| Non Plan Budget ಯೋಜನೇತರ ಬಜೆಟ್ | 996742 | 1109975 | 1114902 | 1207892 |
| **Particulars of allocation made und er SCSP for Scheduled Castes ಎಸ್.ಸಿ.ಎಸ್.ಪಿ ಅಡಿಯಲ್ಲಿ ನಿಗದಿಸಿದ ಬಜೆಟ್.** | | | | |
| Allocation under SCP | 28218.81 | 41561.13 | 35800.6 | 48638.31 |
| SCP in Percentage | 6.82 | 7.48 | 7.53 | 8.76 |
| Due SCP in percentage | 16.60 | 16.60 | 16.60 | 16.60 |
| Due SCP | 68661.75 | 92183.45 | 78938.31 | 92183.45 |
| Denial under SCP | 40442.94 | 50622.32 | 43137.71 | 43545.14 |

ದಲಿತರಿಗಾಗಿ ಮೀಸಲಿರುವ ಹಣದ ಸರಿಯಾದ ಹಂಚಿಕೆ ಮತ್ತು ವೆಚ್ಚವಾಗಬೇಕೆಂದರೆ ಮತ್ತು ಎಸ್.ಸಿ.ಎಸ್.ಪಿ ಗೆ ಶಾಸನಬದ್ಧ ಸ್ಥಾನಮಾನಗಳನ್ನು ನೀಡುವ ಕಾನೂನನ್ನು ಜಾರಿಗೆ ತರಬೇಕೆಂದು ಸಿಪಿಐ(ಎಂ) ಪಕ್ಷವು ಹೇಳುತ್ತ ಬಂದಿದೆ. ಆದರೆ ಯು.ಪಿ.ಎ ಇಂಥಹ ಒಂದು ಶಾಸನಬದ್ಧ ಕಾನೂನನ್ನು ಜಾರಿಗೆ ತರಲು ವಿಫಲವಾಗಿದೆ.

ಸಿಪಿಐ(ಎಂ) ಪಕ್ಷ ಮತ್ತು ಸಮಾನ ಮನಸ್ಕ ಸಂಘಟನೆಗಳ ನಿರಂತರ ಹೋರಾಟದಿಂದಾಗಿ ಅಂತಹ ಕಾನೂನನ್ನು ಆಂದ್ರಪ್ರದೇಶ ಸರ್ಕಾರ ಮಾಡಿದೆ.

ಬಹುಮುಖಿ ತಾರತಮ್ಯಗಳು:

ದಲಿತರು ಸಭ್ಯ ಜೀವನ ನಡೆಸಲು ಸಾಧ್ಯವಾಗುವಂತೆ ಮೂಲಭೂತ ಸೌಕರ್ಯವನ್ನು ಒದಗಿಸುವಲ್ಲಿ ತೀವ್ರತರನಾದ ತಾರತಮ್ಯವಿದೆ. ಸೆಪ್ಟಂಬರ್ 30 2013ರಂದು ನೊಂದಣಿ ಪ್ರಧಾನ ಅಧಿಕಾರಿ ಮತ್ತು ಜನಗಣತಿ ಜಿಲ್ಲಾಧಿಕಾರಿಗಳ ಕಛೇರಿಗಳು ಕೊಳಗೇರಿಯಲ್ಲಿ ವ್ಯಾಪಿಸುತ್ತಿರುವ ಸಂಸಾರಗಳ ಬಗ್ಗೆ ಒಂದು ವರದಿಯನ್ನು ಬಿಡುಗಡೆ ಮಾಡಿದ್ದಾರೆ. ಕೊಳಗೇರಿಯಲ್ಲಿ ವಾಸಿಸುತ್ತಿರುವ 3ರಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರೆ,ಇತರರು 10ರಲ್ಲಿ ಒಬ್ಬರಾಗಿರುತ್ತಾರೆ. ಕಳೆದ ಒಂದು ದಶಕದಲ್ಲಿ ಕೊಳಗೇರಿಯಲ್ಲಿ ವಾಸಿಸುವ ಪರಿಶಿಷ್ಟ ಜಾತಿಯವರ ಪ್ರಮಾಣದಲ್ಲಿ ಏರಿಕೆಯಾಗಿದೆ. ಕೊಳಗೇರಿ ಪ್ರದೇಶ ಅಭಿವೃದ್ಧಿ ಮತ್ತು ನಿರ್ಮೂಲನೆ 1956ರ ಕಾನೂನಿನ ಪ್ರಕಾರ ಜನನಿಭಿಡತೆಯಿಂದ ಕೂಡಿದ, ದೋಷಪೂರಿತ ವಾತಾವರಣ, ಶಿಥಿಲವಾದ ಕಟ್ಟಡಗಳು ಮತ್ತು ಇಕ್ಕಟ್ಟಾದ ಅವ್ಯವಸ್ಥೆ ಯ ರಸ್ತೆಗಳು, ಬೆಳಕು,ನೈರ್ಮಲ್ಯದ ಕೊರತೆ ಅಥವಾ ಇವುಗಳೆಲ್ಲವುಗಳ ಸಂಯುಕ್ತವಾದ ಅಂಶಗಳನ್ನು ಹೊಂದಿ ನಿವಾಸಿಗಳ ಆರೋಗ್ಯ ಮತ್ತು ಸ್ವಾಸ್ತ್ಯಕ್ಕೆ ಹಾನಿ ಮಾಡುವಂತಹ, ಎಲ್ಲ ವಿಧದಿಂದ ವಾಸಿಸಲು ಯೋಗ್ಯವಲ್ಲದ ವಲಯಗಳನ್ನು ಕೋಳಗೇರಿಗಳೆಂದು ನಿರ್ವಚಿಸಿದೆ.

ಈ ಮುಂದಿನ ಪಟ್ಟಿ ದಲಿತರಿಗೆ ಒದಗಿಸಬೇಕಾದ ಮೂಲಭೂತ ವ್ಯವಸ್ಥೆಯಲ್ಲಿನ ತಾರತಮ್ಯವನ್ನು ವಿವರಿಸುತ್ತದೆ.

## ಪರಿಶಿಷ್ಟ ಜಾತಿ ಮತ್ತು ಇತರ ಸಾಮಾಜಿಕ ಗುಂಪುಗಳು :

| Indicators ಸೂಚ್ಯಂಕಗಳು | SCs/ಪ.ಜಾ | All groups/ಇತರ ಗುಂಪುಗಳು |
|---|---|---|
| Literacy (%) /ಶಿಕ್ಷಣ | 63.5 | 72 |
| Malnutrition among Women (BMI<18.5) (%) ಮಹಿಳೆಯರ ಅಪೌಷ್ಟಿಕತೆ | 41.2 | 33 |
| Underweight Children (%) ಮಕ್ಕಳ ಕಡಿಮೆ ತೂಕದ ಪ್ರಮಾಣ | 47.9 | 39.1 |
| Pucca Housing (%) ಪಕ್ಕಾ ಮನೆ | 38.3 | 66.1 |
| No Toilet Facility (%) ಶೌಚಾಲಯ ಇಲ್ಲದಿರುವ % | 65 | 49.2 |
| Electricity for Domestic use (%) ಗೃಹ ಬಳಕೆಗೆ ವಿದ್ಯುತ್ % | 61.2 | 75 |
| Infant Mortality Rate ( per 1000 live birth) ಶಿಶು ಮರಣ% (ಹುಟ್ಟುವ ಸಾವಿರ ಮಕ್ಕಳಿಗೆ) | 66.4 | 50 |
| Under-5 Mortality Rate ( per 1000 live birth) (ಹುಟ್ಟುವ ಸಾವಿರ ಮಕ್ಕಳಿಗೆ) ಐದು ವರ್ಷದೊಳಗಿನ ಮಕ್ಕಳ ಮರಣದ ಪ್ರಮಾಣ | 88.1 | 74.3 |
| Under 5 mortality rate Child Immunisation (%) ಮಕ್ಕಳ ಇಮ್ಯುನೈಷೇಶನ್ | 39.7 | 43.5 |
| Incidence of Poverty (Rural) ಗ್ರಾಮೀಣ ಬಡತನ | 20.6 | 14.9 |
| Incidence of Poverty (Urban) ನಗರಗಳ ಬಡತನ | 25.3 | 14.5 |

Source: India – Human Development Report 2011: Towards Social Inclusion, Institute of Applied Manpower Research, Planning Commission

## ದಲಿತರ ವಿರುದ್ಧದ ಹಿಂಸೆ:

ಆರ್ಥಿಕ ತಾರತಮ್ಯ ಮತ್ತು ಮೂಲಭೂತ ಸೌಕರ್ಯಗಳ ನಿರಾಕರಣೆಗಳ ಜೊತೆಯೇ ದಲಿತರ ಮೇಲೆ ತೀಕ್ಷ್ಣವಾದ ಮತ್ತು ಅಮಾನುಷ ದಬ್ಬಾಳಿಕೆ ಕೂಡ ನಡೆಯುತ್ತದೆ. ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಕ್ಕೆ ಉದಾಹರಣೆಯಾಗಿ ಧರ್ಮಪುರಿ, ಮಿರ್ಚಪುರ, ಖೈರ್‌ಲಾಂಜ್ ಮತ್ತು ಉತ್ತರಪ್ರದೇಶ, ಹರ್ಯಾಣ ಮುಂತಾದ ಕಡೆ ಅನೇಕ ಹಳ್ಳಿಗಳಲ್ಲಿ ನಡೆದ ಕ್ರೂರ ದೌರ್ಜನ್ಯಗಳನ್ನು ನೋಡಬಹುದು. ರಾಜಧಾನಿ ದೆಹಲಿ ಕೂಡ ಈ ಅವಮಾನದಿಂದ ಹೊರತಾಗಿಲ್ಲ ಏಕೆಂದರೆ ಇತ್ತೀಚೆಗೆ ದಲಿತ ಮದುವೆ ಗಂಡಿಗೆ ತನ್ನ ಮದುವೆ ಮೆರವಣಿಗೆಯಲ್ಲಿ ಕುದುರೆ ಏರಲು ಬಿಡಲೇ ಇಲ್ಲ. ಡೆಲ್ಲಿಯ ಪ್ರಮುಖ ವೈದ್ಯಕೀಯ ಸಂಸ್ಥೆ (ಏ.ಐ.ಎಂ.ಎಸ್) ಕೂಡ

ದಲಿತ ವಿದ್ಯಾರ್ಥಿಗಳನ್ನು ತೊಂದರೆಗೊಳಪಡಿಸಿ ಅವರನ್ನು ಅನುತ್ತೀರ್ಣಗೊಳಿಸಿ ಬೇರೆ ವಿದ್ಯಾರ್ಥಿನಿಲಯಗಳಲ್ಲಿ ವಾಸಿಸಲು ಒತ್ತಡ ಹೇರುವ ಮೂಲಕ ಜಾತಿ ತಾರತಮ್ಯದ ಅಪರಾಧಿಯಾಗಿದೆ. ಅತ್ಯಂತ ದಯನೀಯ ಸ್ಥಿತಿಯೆಂದರೆ ಂಋಒಖ ನಲ್ಲಿ ಮಾತ್ರವಲ್ಲದೇ ಬೇಕಷ್ಟು ಋಖಖ ಗಳಲ್ಲಿಯೂ ದಲಿತ ಭೋಧಕ ಹುದ್ದೆಗಳು ಖಾಲಿ ಬಿದ್ದಿದೆ. ದಲಿತರ ಬಗೆಗಿನ ಜಾತಿ ತಾರತಮ್ಯವನ್ನು ಅಧ್ಯಯನ ಮಾಡಲು ಸರ್ಕಾರ ವೇ ನೇಮಿಸಿದ ಸಮಿತಿಯ ವರದಿಯಲ್ಲಿ ಈ ಎಲ್ಲಾ ವಾಸ್ತವದ ಅಂಶಗಳು ನಮೂದಾಗಿವೆ. ಆದರೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

ಪರಿಶಿಷ್ಟ ಜಾತಿಯ ಮೇಲಿನದೌರ್ಜನ್ಯ ತಡೆ ಕಾನೂನಿನಡಿ ಪ್ರಕರಣಗಳ ದಾಖಲೆ ಹೆಚ್ಚುತ್ತಿವೆ. 2010ರಲ್ಲಿ ರಾಷ್ಟ್ರೀಯ ಅಪರಾಧ ದಾಖಲೆ ಮಂಡಲಿಯ ಪ್ರಕಾರ 10,513ಪ್ರಕರಣಗಳು, ಈ ಕಾನೂನಿನಡಿ ದಾಖಲಿಸಲ್ಪಟ್ಟಿದ್ದವು. 11342 ಪ್ರಕರಣಗಳು 2011ರ ರಲ್ಲಿ ಮತ್ತು 12576 ಪ್ರಕರಣಗಳು 2012ರಲ್ಲಿ ದಾಖಲಿಸಲ್ಪಟ್ಟಿದೆ.

ದಲಿತರ ಮೇಲಿನ ಅಪರಾಧಗಳ ಸಂಖ್ಯೆಯಲ್ಲಿ ಆಗುತ್ತಿರುವ ಹೆಚ್ಚಳ, ಶಿಕ್ಷೆಯಲ್ಲಿ ಇಳಿಕೆ, ದೌರ್ಜನ್ಯ ತಡೆ ಕಾನೂನಿಗೆ ತಿದ್ದುಪಡಿ ತಂದು, ಅದರಲ್ಲಿರುವ ತಪ್ಪಿಸಿಕೊಳ್ಳಲು ಇರುವ ಅವಕಾಶಗಳನ್ನು ಮುಚ್ಚಿ ಆ ಕಾನೂನನ್ನು ಇನ್ನಷ್ಟು ಗಟ್ಟಿಗೊಳಿಸುವ ಅವಶ್ಯಕತೆ ಇದೆ. ಆದರೆ ನಿರಂತರ ಪ್ರತಿಭಟನೆಯ ನಂತರವೂ ಯುಪಿಎ ಸರ್ಕಾರವು ಕಾನೂನಿಗೆ ತಿದ್ದುಪಡಿಗಳನ್ನು ತಂದು ದೌರ್ಜನ್ಯ ತಡೆ ಕಾನೂನನ್ನು ಇನ್ನಷ್ಟು ಸದೃಢಗೊಳಿಸಲು ಸೋತಿದೆ.

ಪ್ರಕರಣಗಳನ್ನು ದಾಖಲಿಸಲು ದಲಿತರು ಬಹಳ ಪರಿಶ್ರಮ ಪಡಬೇಕಾಗುತ್ತದೆ. ಸರ್ಕಾರವೇ ಒಪ್ಪಿಕೊಂಡಂತೆ ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಪಡುವ ಪ್ರಕರಣಗಳ ಪ್ರಮಾಣ ಕೇವಲ 3 ರಿಂದ 8% ಮಾತ್ರವಾದರೆ ಬಾಕಿ ಉಳಿದಿರುವುದು 80 ರಿಂದ 90 %. ಭಾತ್ನಾನಿ ತೋಲಾ ದಲ್ಲಿ ನಡೆದ 21 ಜನ ದಲಿತರ ಕಗ್ಗೊಲೆ ಯ ಪ್ರಕರಣದಲ್ಲಿ ಸಾಕ್ಷಾಧಾರ ವಿಲ್ಲವೆಂದು ಅಪರಾಧಿಗಳನ್ನು ನ್ಯಾಯಾಲಯ 2012 ರಲ್ಲಿ ಬಿಡುಗಡೆ ಮಾಡಿದ ತೀರ್ಪನ್ನು ಪ್ರಸ್ತಾಪಿಸುತ್ತ ಸ್ವತಃ ಸಚಿವರೇ ಸದನದಲ್ಲಿ ಹೇಳಿಕೆ ನೀಡುವಾಗ ಕೊಟ್ಟ ಮಾಹಿತಿ ಇದು.!

ಅದಕ್ಕಿಂತ ಹೆಚ್ಚಾಗಿ ಈ ವರ್ಷದ ಆಯುವ್ಯಯದಲ್ಲಿ ಯುಪಿಎ ಸರಕಾರವು ದಲಿತರ ಮೇಲಿನ ದೌರ್ಜನ್ಯ ತಡೆಗಾಗಿ ಮೀಸಲಿಡುವ ಹಣವನ್ನು ಕಡಿತಗೊಳಿಸಿದೆ.

## ಮೋದಿಯವರ ಪ್ರಕಾರ ಝಾಡಮಾಲಿ ಕೆಲಸವೆಂದರೆ ಅಧ್ಯಾತ್ಮಿಕ ಚಟುವಟಿಕೆ:

ಹಿಂದುತ್ವದ ಪ್ರಯೊಗಾಲಯವಾದ ಗುಜರಾತಿನಲ್ಲಿ ದಲಿತರ ಪರಿಸ್ಥಿತಿ ಇನ್ನಷ್ಟು ಹೆಚ್ಚು ಶೋಚನೀಯವಾಗಿದೆ. ಬಿ.ಜೆ.ಪಿ.ಯ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯವರ ಪ್ರಕಾರ ಝಾಡಮಾಲಿ ಕೆಲಸ ಮಾಡುವ ಮೂಲಕ ದಲಿತರು ಅಧ್ಯಾತ್ಮಿಕ ಅನುಭವವನ್ನು ಪಡೆಯಬಹುದು, 'ದಲಿತರು ಕೇವಲ ತಮ್ಮ ಜೀವನ ನಿರ್ವಹಣೆಗಾಗಿ ಮಾತ್ರವೇ ಈ ಕೆಲಸವನ್ನು ಮಾಡುತ್ತಿದ್ದಾರೆ ಎಂಬುದನ್ನು ನಾನು ನಂಬುವುದಿಲ್ಲ. ಅದು ಹಾಗೆ ಇದ್ದಲ್ಲಿ ವಂಶಪಾರಂಪರ್ಯವಾಗಿ ಈ ಕೆಲಸದಲ್ಲಿ ಅವರು ಮುಂದುವರೆಯುತ್ತಿರಲಿಲ್ಲ. ಅದು ಯಾವುದೋ ಒಂದು ನಿರ್ಧಿಷ್ಟ ಕಾಲದಲ್ಲಿ ಯಾರೋ ಒಬ್ಬರಿಗೆ ಇದು ದೇವರ ಕೆಲಸ ದೇವರಿಗಾಗಿ ದುಡಿಯುವುದು ತನ್ನ ಕರ್ತವ್ಯ, ಈ ಕೆಲಸವನ್ನು ಅವರೇ ಮಾಡಬೇಕೆಂದು ದೇವರೇ ಈ ಉದ್ಯೋಗವನ್ನು ದಯಪಾಲಿಸಿರಬೇಕೆಂದು ಜ್ಞಾನೋದಯವಾಗಿರಲೇಬೇಕು ಮತ್ತು ಶುದ್ಧಿ ಮಾಡುವ ಈ ಉದ್ಯೋಗವು ಅದು ಶತವರ್ಷಗಳ ಕಾಲದವರೆಗೆ ಆಂತರಿಕ ಅಧ್ಯಾತ್ಮಿಕ ಚಟುವಟಿಕೆಯಾಗಿ ಮುಂದುವರೆಯಬೇಕಿದೆ ಆದ್ದರಿಂದ ಅದೆ ಜ್ಞಾನೋದಯದ ಆಧ್ಯಾತ್ಮಿಕ ಚಟುವಟಿಕೆ.' ಎಂದು ಹೇಳಿದ್ದಾರೆ. ಅಂತಹ ಕಲ್ಪನೆಗಳ ಪ್ರತಿಪಾದಕ ಏಕೆ ನುಡಿಯಂತೆ ನಡೆಯುವುದಿಲ್ಲ ಎಂದು ಆಶ್ಚರ್ಯವಾಗುತ್ತಿದೆ.

ಅಂತಹ ಮನುಷ್ಯ ಮತ್ತು ಆ ಪಕ್ಷದಿಂದ ದಲಿತರ ಪರಿಸ್ಥಿತಿ ಮತ್ತು ಸಮಾಜದಲ್ಲಿ ನಿರಾಕರಣೆಗೆ ಒಳಗಾದ ವಿಭಾಗವು ಸುಧಾರಿಸಬಹುದೇ? ಇಲ್ಲ ಬಿಜೆಪಿಯು ಅಧಿಕಾರಕ್ಕೆ ಆರಿಸಿ ಬಂದರೆ ಹಾಗೆ ಆಗುವುದೇ ಇಲ್ಲ ಅದಕ್ಕೆ ವಿರುದ್ಧವಾಗಿ ಮತ್ತಷ್ಟು ಕ್ಷೀಣದೆಸೆಯನ್ನು ಪಡೆಯಬಹುದು.

2011ರಲ್ಲಿ ಜನಗಣತಿಯು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಗುಜರಾತಿನಲ್ಲಿ 2000ಕ್ಕಿಂತ ಹೆಚ್ಚು ಕುಟುಂಬಗಳು ಕೈಗಳಿಂದಲೇ ಕಸಬಳಿಯುವ ಕೆಲಸವನ್ನು ಮಾಡುತ್ತಿವೆ. ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ನಡೆಸಿದ ಸಮೀಕ್ಷೆಯು ಗುಜರಾತಿನಲ್ಲಿ 12000 ಜನ ಕೈಗಳಿಂದ ಕಸಬಳಿಯುವವರು ಇದ್ದಾರೆ. ಮತ್ತು ಗುಜರಾತಿನಲ್ಲಿಯೇ ಅತಿ ಹೆಚ್ಚು ದಲಿತ ಜನಸಂಖ್ಯೆಯನ್ನು ಹೊಂದಿದ ಸೌರಾಷ್ಟ್ರದಲಿ 900 ಕುಟುಂಬಗಳು ಮಾನವ ಕೈಗಳಿಂದ ಕಸಬಳಿಯುವ ಕೆಲಸವನ್ನು ಮಾಡುತ್ತಿದ್ದು ಮುಂಚೂಣಿಯಲ್ಲಿದೆ.

ಬಿಜೆಪಿ ಆಳುತ್ತಿರುವ ಮಾದರಿ ಆಳ್ವಿಕೆಯ ಮಾದರಿ ಸಂಸ್ಥಾನದಲ್ಲಿ ಗಲಭೆಗೆ ಆಸ್ಪದ ಕೊಡುವಂತಹ ಜಾತಿ ತಾರತಮ್ಯವಿದೆ. ಕೆಲವು ಇತ್ತೀಚಿನ ಪ್ರಸಂಗಗಳು.

1. 2011ರಲ್ಲಿ ನಡೆಸಿದ ಒಂದು ಸಮೀಕ್ಷೆಯಲ್ಲಿ ಎಲ್ಲಿ ದಲಿತರ ಮಕ್ಕಳು ಮತ್ತು ದಲಿತರಲ್ಲದವರ ಮಕ್ಕಳನ್ನು ಗುಜರಾತಿನ 12 ಹಳ್ಳಿಗಳಲ್ಲಿ ಸಂದರ್ಶನ ನಡೆಸಿದಾಗ ಸರಕಾರಿ ಆಸ್ಪತ್ರೆಯಲ್ಲಿ ಮತ್ತು ಕ್ಲಿನಿಕ್ಕುಗಳಲ್ಲಿ ಶೇ.90ಕ್ಕಿಂತ ಹೆಚು ದಲಿತ ಮಕ್ಕಳು ಔಷಧ ಸೇವೆ ಪಡೆಯುವಾಗ ತಾರತಮ್ಯಗಳನ್ನು ಎದುರಿಸಿದ್ದಾರೆ. ಶೇ.80ಕ್ಕಿಂತ ಹೆಚ್ಚು ದಲಿತ ಮಕ್ಕಳು ರೋಗಲಕ್ಷಣ ಪರೀಕ್ಷೆಯುನ್ನು (ಟಚಿಥಠಡಿಚಿಣಠಡಿಥಿ ಣಜಣ )ಪಡೆಯುವಲ್ಲಿ ತಾರತಮ್ಯವನ್ನು ಎದುರಿಸಿದ್ದಾರೆ.

2. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ಹೇಳಿಕೆಯ ಪ್ರಕಾರ ಗುಜರಾತಿನ ಕನಿಷ್ಟ 77 ಹಳ್ಳಿಗಳಲ್ಲಿ ದಲಿತರಿಗೆ ವಲಸೆ ಹೋಗಲು ಸಾಮಾಜಿಕ ಬಹಿಷ್ಕಾರದ ಮೂಲಕ ಒತ್ತಡ ಹೇರಲಾಗಿದೆ. ಪೋಲಿಸರ ಕಿರುಕುಳದ 100ಕ್ಕಿಂತ ಹೆಚ್ಚು ದೂರುಗಳನ್ನು ಎನ್.ಹೆಚ್.ಆರ್.ಸಿ. ಯು ತೆಗೆದುಕೊಂಡಿದೆ. ವಿಶೇಷವಾಗಿ ಪೋಲಿಸರು ದೂರುಗಳನ್ನು ದಾಖಲಿಸಲು ನಿರಾಕರಿಸುತ್ತಾರೆ. ಅಥವಾ ದಾಖಲಿಸಿರುವ ದೂರುಗಳ ವ್ಯಾಜ್ಯವನ್ನು ನಿರ್ವಹಿಸುವುದರಲ್ಲಿ ಪೂರ್ಣ ನಿರ್ಲಕ್ಷ್ಯವನ್ನು ತೋರುತ್ತಾರೆ.

3. ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾನೂನಿನ ಅಡಿ ಗುಜರಾತಿನಲ್ಲಿ ಬರಿ 3.5 ಶೇಕಡ ಪ್ರಕರಣಗಳು ದಾಖಲಾಗುತ್ತವೆ..

4. ಗಾಲ್‌ಸಾನಾ ಎಂಬ ಅಹಮದಾಬಾದಿನಿಂದ 100 ಕಿ.ಮೀ ದೂರದಲ್ಲಿರುವ ಒಂದು ಹಳ್ಳಿಯಲ್ಲಿ ದಲಿತರನ್ನು ಹಳ್ಳಿಯಲ್ಲಿರುವ 5 ದೇವಸ್ಥಾನಗಳಲ್ಲಿ ಒಂದರಲ್ಲಿ ಕೂಡ ಒಳಗೆ ಸೇರಿಸುವುದಿಲ್ಲ. ಕೆಲವು ತರುಣ ಪೀಳಿಗೆಯ ದಲಿತರು ಧೈರ್ಯ ಮಾಡಿ ಈ ನಿಷೇಧವನ್ನು ವಿರೋಧಿಸಿದರೆಂದು ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಲಾಯಿತು. ಆದರೆ ದಲಿತರ ಪರವಾಗಿ ಸರ್ಕಾರ ಬರಲಿಲ್ಲ.

5. ಥಾನಗರ್‌ನಲ್ಲಿ ಸೆಪ್ಟೆಂಬರ್ 2012 ರಲ್ಲಿ ನಡೆದ ದಲಿತರ ಭೀಕರ ಕೊಲೆಯ ಸಂದರ್ಭದಲ್ಲಿ ಕೂಡ ಅಂಥಹ ಘಟನೆ ನಡೆಯುವ

ಮುನ್ಸೂಚನೆಯನ್ನು ಗ್ರಹಿಸಿ ಮೊದಲೇ ದೂರು ನೀಡಿದ್ದರೂ, ಗುಜರಾತ್ ರಾಜ್ಯ ಸರ್ಕಾರ ದಲಿತರನ್ನು ಇದರಿಂದ ಪಾರು ಮಾಡಲು ಮುಂದಾಗಲಿಲ್ಲ.

ದಲಿತರನ್ನು ಭಾಧಿಸುವ ಪ್ರಶ್ನೆಗಳನ್ನು ತೆಗೆದುಕೊಂಡು ನಿರಂತರವಾಗಿ ಮತ್ತು ದಲಿತರ ಮೇಲಿನ ತಾರತಮ್ಯ ಮತ್ತು ಹಿಂಸೆಯ ವಿರುದ್ದ ಹೋರಾಟವನ್ನು ನಡೆಸುತ್ತಿರುವ ಏಕೈಕ ಪಕ್ಷ ಸಿ.ಪಿ.ಐ.(ಎಂ) ಪಕ್ಷ.

ಧರ್ಮಪುರಿಯಲ್ಲಿ ಜಾತಿ ಆಧಾರಿತ ಧಾಳಿ ನಡೆಸಿ ಉದ್ದೇಶ ಪೂರ್ವಕವಾಗಿ ಬೆಂಕಿ ಇಟ್ಟಿದ್ದರಿಂದಾಗಿ ದಲಿತರು ಕೋಟ್ಯಾಂತರ ಬೆಲೆಯುಳ್ಳ ಆಸ್ತಿಯನ್ನು ಕಳೆದುಕೊಂಡರು, ಸಿಪಿಐ(ಎಂ) ಮತ್ತು ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ವೇದಿಕೆ (ತಮಿಳುನಾಡು ಅನ್‌ಟಚ್ಚಬಲಿಟಿ ಎರಾಡಿಕೇಷನ್ ಫ್ರಂಟ್ (ಟಿ.ಎನ್.ಯು.ಇ.ಎಫ್)) ಸೇರಿ ಭಾದಿತ ಕುಟುಂಬಗಳಿಗೆ ನ್ಯಾಯ ದೊರಕಿಸಿಕೊಡಲು ಹೋರಾಟವನ್ನು ಮಾಡಿದರು. ಉತ್ತುಪುರಂ ನಲ್ಲಿ ನಿರ್ಮಿತವಾಗಿದ್ದ ಅಸ್ಪೃಶ್ಯತಾ ಗೋಡೆಯನ್ನು ಸಿಪಿಐ(ಎಂ) ಮತ್ತು ಟಿ.ಎನ್.ಯು.ಇ.ಎಫ್ ಗಳ ಜಂಟಿ ಹೋರಾಟದ ಮೂಲಕ ನಿರ್ನಾಮ ಮಾಡಲಾಯಿತು.

ಹಾಗೆಯೇ ಆಂಧ್ರಪ್ರದೇಶದಲ್ಲಿ ಸಿಪಿಐ(ಎಂ) ಮತ್ತು ಕೆವಿಪಿಎಸ್ ಗಳು ಹಮ್ಮಿಕೊಂಡ ನಿರಂತರ ಹೋರಾಟದಿಂದಾಗಿ ಪ.ಜಾ ಮತ್ತು ಪ.ಪಂ ಗಳಿಗೆ ಸಬ್‌ಪ್ಲಾನ್ ಉಪ ಹಂಚಿಕೆಗಳಿಗೆ ಕಾನೂನಿಂದ ಸ್ಥಾಪಿತ ಸ್ಥಾನಮಾನವನ್ನು ಕೊಡಲಾಯಿತು, ಈಗಾಗಲೆ ಅಸ್ತಿತ್ವದಲ್ಲಿರುವ ಹಳ್ಳಿಗಳಲ್ಲಿ ದಲಿತರಿಗೆ ಸಾರ್ವಜನಿಕ ಬಾವಿಗಳನ್ನು ಮತ್ತು ನೀರಿನ ಸಂಗ್ರಹಗಳನ್ನು ಉಪಯೋಗಿಸಲು ಬಿಡದಿರುವುದು, ಕೆಲವು ನಿರ್ದಿಷ್ಟ ಬೀದಿಗಳಲ್ಲಿ ಓಡಾಡಲು ಬಿಡದಿರುವುದು, ಸ್ಮಶಾನಗಳಲ್ಲಿನ ನಿರಾಕರಣೆ ಹೋಟೆಲ್ಲುಗಳಲ್ಲಿ ಮತ್ತು ಕ್ಯಾಂಟೀನುಗಳಲ್ಲಿ ಎರಡು ಲೋಟಗಳ ವ್ಯವಸ್ಥೆ ಮತ್ತು ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಣೆ ಇವುಗಳ ವಿರುದ್ದವಾಗಿ ಹೋರಾಟಗಳನ್ನು ನಡೆಸಲಾಯಿತು. ದಲಿತರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿದಾಗೆಲ್ಲ ಸಿಪಿಐ(ಎಂ) ದಲಿತರೊಡನೆ ಧೃಢವಾಗಿ ನಿಂತು ಸರ್ಕಾರದ ಮಧ್ಯಪ್ರವೇಶಕ್ಕೆ ಒತ್ತಡವನ್ನು ಹಾಕಿತ್ತು.

ಪಶ್ಚಿಮ ಬಂಗಾಳ, ಕೇರಳಾ ಮತ್ತು ತಿಪುರಾ ಗಳಲ್ಲಿ ಜಾರಿಗೆ ತಂದ ಭೂಸಧಾರಣಾ ನೀತಿಯಿಂದ ದಲಿತರಿಗೆ ಹೆಚ್ಚು ಪ್ರಯೋಜನವಾಗಿದೆ. ಎಡ ರಂಗ ಸರ್ಕಾರಗಳು

ಮತ್ತು ಪ್ರಬಲ ಎಡ ಚಳುವಳಿಯ ಕಾರಣದಿಂದ ಜಾತಿ ತಾರತಮ್ಯವನ್ನು ಬಲವಾಗಿ ವಿರೋಧಿಸಲಾಗುತ್ತಿತ್ತು. ಮತ್ತು ಅದರಿಂದಾಗಿಯೇ ಆ ರೀತಿಯ ತಾರತಮ್ಯ ಮತ್ತು ಹಿಂಸೆ ಇತರ ರಾಜ್ಯಗಳಲ್ಲಿ ಕಂಡು ಬರುವಂತೆ ಅಲ್ಲಿ ಕಂಡು ಬರುತ್ತಿರಲಿಲ್ಲ. ಈಗ ಆ ಟಿಎಂಸಿ ಯ ನಾಯಕತ್ವದ ಪಶ್ಚಿಮಬಂಗಾಳದಲ್ಲಿ ಹಿಂದಿನ ಭೂ ಮಾಲಿಕರು, ಯಾರ ಭೂಮಿಯನ್ನು ಬಡವ ಭೂಹಿನರಿಗೆ, ಅದರಲ್ಲಿಯು ಹೆಚ್ಚಾಗಿ ದಲಿತರಿಗೆ ಹಂಚಲಾಗಿತ್ತೋ ಅವನ್ನು ಮತ್ತೆ ಸ್ವಾಧೀನ ಪಡಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ.. ಸಿಪಿಐ(ಎಂ) ಅಂತಹ ಪ್ರಯತ್ನಗಳನ್ನು ತಡೆಯಲು ತೀವ್ರ ಹೋರಾಟ ನಡೆಸುತ್ತಿದೆ. ದಲಿತರ ಬದುಕನ್ನು ಉತ್ತಮಗೊಳಿಸಲು ಮತ್ತು ಅವರ ಸಬಲೀಕರಣಕ್ಕಾಗಿ, ಹಾಗೂ ಭಯಾನಕವಾದ ಜಾತಿವ್ಯವಸ್ಥೆಯ ವಿರುದ್ದ ಒಂದು ಬಲಯುತವಾದ ಹೋರಾಟಕ್ಕಾಗಿ ಸಿಪಿಐ(ಎಂ) ಪಕ್ಷವನ್ನು ಬಲಪಡಿಸಿ. ಎಲ್ಲಾ ತರಹದ ಜಾತಿ ತಾರತಮ್ಯಗಳ ಮತ್ತು ದಬ್ಬಾಳಿಕೆಗಳ ವಿರುದ್ದ ಹೋರಾಟಗಳನ್ನು ಬಲಪಡಿಸಿ.

ಸಿಪಿಐ(ಎಂ)ಗೆ ಮತ ನೀಡಿ ಜಾತಿವ್ಯವಸ್ಥೆಯ ವಿರುದ್ದ ದಲಿತರಿಗೆ ಸಮಾನತೆ ಮತ್ತು ಗೌರವಕ್ಕಾಗಿ ಎಡಪಕ್ಷಗಳನ್ನು ಬಲಪಡಿಸಿ.

ಅನುವಾದ: **ಗೋಪಾಲಕೃಷ್ಣ ಅರಳಹಳ್ಳಿ**

**ಸದಾನಂದ ಭಟ್**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

## ಒಂದು ಜಾತ್ಯಾತೀತ ಮತ್ತು
## ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು    ಪ್ರತಿಗಳು: 3,000